ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ: ಪಪೂಶಿಇ/ಶೈಶಾ-04/ಅ.ವಿ.ವಿ.ಹೆ.ಸೌ/2017-18 ದಿನಾಂಕ:28 -02-2018.

**ಸುತ್ತೋಲೆ**

ವಿಷಯ: ಅಂಧ/ವಿಕಲಚೇತನ ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳ ಕುರಿತು.

ಉಲ್ಲೇಖ: 1. ಸರ್ಕಾರಿ ಆದೇಶ ಕ್ರಮಾಂಕ:ಇಡಿ 42 ಟಿಪಿಯು 2004 ದಿನಾಂಕ: 26-03-2004,
2. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ370 ಯೋಯೋಕ2009 ದಿನಾಂಕ:17-02-2010.
3. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಪಿಯುಇ/ಶೈ.ಶಾ-04/ಹೆ.ಸೌ.ನೀ.ಕು-01/2014-15, ದಿನಾಂಕ 10-02-2015.
4. ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಟಿಪಿಯು 2018, ಬೆಂಗಳೂರು ದಿನಾಂಕ: 28-02-2018.

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಕಲಿಕೆಯಲ್ಲಿ ನ್ಯೂನತೆ/ಅಂಧ/ವಿಕಲಚೇತನ/ಮೂಕತನ/ಶ್ರವಣದೋಷ ಹೊಂದಿರುವ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯಗಳನ್ನು ಸರ್ಕಾರದ ಆದೇಶ/ಸುತ್ತೋಲೆಗಳಂತೆ ನೀಡುವ ಸೌಲಭ್ಯಗಳ ವಿವರಗಳು ಈ ಕೆಳಕಂಡಂತೆ ನೀಡಲಾಗಿದೆ.

| ಕ್ರಮ ಸಂಖ್ಯೆ | ನ್ಯೂನತೆ | ಸೌಲಭ್ಯಗಳು/ವಿನಾಯಿತಿಗಳು |
|---|---|---|
| 1 | ಶ್ರವಣದೋಷ, ಮೂಕತನ, ಕಲಿಕೆಯಲ್ಲಿ ನ್ಯೂನತೆ, ಬುದ್ಧಿಮಾಂದ್ಯ | • ಮಾಧ್ಯಮದ ಭಾಷೆ ಹೊರತುಪಡಿಸಿ ಒಂದು ಭಾಷೆ ವಿಷಯಕ್ಕೆ ವಿನಾಯ್ತಿ ನೀಡಲಾಗುವುದು.<br>• ಮೂರು ಗಂಟೆ ಅವಧಿಯಲ್ಲಿ ಉತ್ತರಿಸಬೇಕಾದ ವಿಷಯಗಳಿಗೆ ಒಂದು ಗಂಟೆ ಹೆಚ್ಚಿನ ಕಾಲಾವಕಾಶ ನೀಡುವುದು.<br>• ಪರೀಕ್ಷಾ ಮೌಲ್ಯಮಾಪನದಲ್ಲಿ ಸಣ್ಣಪುಟ್ಟ ದೋಷಗಳನ್ನು ಪರಿಗಣಿಸದಿರುವುದು.<br>• ಪರೀಕ್ಷೆಗಳಲ್ಲಿ ಸರಳ ಕಲನ ಯಂತ್ರ ಉಪಯೋಗಿಸಲು ಅನುಮತಿ ನೀಡುವುದು. |
| 2. | ಶಾಶ್ವತ ವಿಕಲಚೇತನ, ಸಂಪೂರ್ಣ ದೃಷ್ಟಿದೋಷ, ದೃಷ್ಟಿಮಾಂದ್ಯ, ಕ್ಷೀಣದೃಷ್ಟಿ (Low Vision) | • ಸಹಾಯಕ ಬರಹಗಾರರು.<br>• ವಾಚಕ ಸಹಾಯಕರರು<br>• ಮೂರು ಗಂಟೆ ಅವಧಿಯಲ್ಲಿ ಉತ್ತರಿಸಬೇಕಾದ ವಿಷಯಗಳಿಗೆ ಒಂದು ಗಂಟೆ ಹೆಚ್ಚಿನ ಕಾಲಾವಕಾಶ ನೀಡುವುದು.<br>• ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುವ ಅಂಧ ಹಾಗೂ ವಿಕಲಚೇತನ ವಿದ್ಯಾರ್ಥಿಗಳಿಗೆ ಸಹಾಯಕ ಬರಹಗಾರರಿಗೆ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬದಲಿ ಇನ್ನೊಬ್ಬ ಸಹಾಯಕರನ್ನು ನೇಮಿಸಬಹುದಾಗಿದೆ. ಆದರೆ ಇಬ್ಬರಿಗಿಂತ ಹೆಚ್ಚಿನ |

| | | |
|---|---|---|
| | | ಸಹಾಯಕರನ್ನು ನೇಮಿಸಿಕೊಳ್ಳುವಂತಿಲ್ಲ. ಸದರಿ ವಿದ್ಯಾರ್ಥಿಗಳ ಮಾಹಿತಿಯನ್ನು ಅಂಧ ಹಾಗೂ ವಿಕಲಚೇತನ ವಿದ್ಯಾರ್ಥಿಯು ಪ್ರಾಂಶುಪಾಲರಿಗೆ ಮುಂಚಿತವಾಗಿ ನೀಡಿ ಅನುಮತಿಯನ್ನು ಪಡೆದುಕೊಳ್ಳತಕ್ಕದ್ದು.<br>• ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಳ್ಳುವ ಅಂಧ ಹಾಗೂ ವಿಕಲಚೇತನ ವಿದ್ಯಾರ್ಥಿಗಳಿಗೆ ಸಂಬಂದಿಸಿದ ಕಾಲೇಜಿನ ಪ್ರಾಂಶುಪಾಲರು ಆ ಕಾಲೇಜಿನಲ್ಲಿ ವ್ಯಾಸಂಗ ಮಾಡುವರನ್ನೇ ಸಹಾಯಕರನ್ನಾಗಿ ನೇಮಕ ಮಾಡಿಕೊಡಬಹುದಾಗಿದೆ. ಇಂತಹ ನೇಮಕಗೊಂಡ ಸಹಾಯಕ ಬರಹಗಾರರಿಗೆ ಪ್ರಾಂಶುಪಾಲರು ಕಾಲೇಜಿನಲ್ಲಿ ಲಭ್ಯವಿರುವ ಸಂಚಿತ ನಿಧಿಯಿಂದ ಪ್ರತಿ ಒಂದು ವಿಷಯಕ್ಕೆ ರೂ100/-ರಂತೆ ಸಹಾಯಕರಿಗೆ ಸಂಭಾವನೆಯಾಗಿ ನೀಡತಕ್ಕದ್ದು.<br>• ವಿದ್ಯಾರ್ಥಿಯು ತಮ್ಮ ಸ್ವಂತ ಇಚ್ಚೆಯಂತೆ ಸಹಾಯಕರನ್ನು ನೇಮಿಸಿಕೊಂಡಲ್ಲಿ ಅಂತಹ ಸಂದರ್ಭದಲ್ಲಿ ಪೋಷಕರು ಸ್ವಂತ ವೆಚ್ಚದಲ್ಲಿ ನಿಯಮಾನುಸಾರ ಸಹಾಯಕರನ್ನು ನೇಮಿಸಿಕೊಳ್ಳಬಹುದಾಗಿದೆ. |
| 3. | ಎಲ್ಲಾ ರೀತಿಯ ನ್ಯೂನತೆ | ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ನೆಲಮಹಡಿಯಲ್ಲಿ ಸೂಕ್ತ ಆಸನ ವ್ಯವಸ್ಥೆ ಮಾಡುವುದು. |
| 4. | ಮಧುಮೇಹ ವಿದ್ಯಾರ್ಥಿಗಳಿಗೆ | ಪರೀಕ್ಷೆಯ ನಡುವೆ ಕೊಠಡಿ ಮೇಲ್ವಿಚಾರಕರು ವಿದ್ಯಾರ್ಥಿಗಳಿಗೆ ಅವಶ್ಯಕವಿದ್ದಲ್ಲಿ ಮಧುಮೇಹಕ್ಕೆ ಸಂಬಂಧಿಸಿದ ಪದಾರ್ಥಗಳನ್ನು ತಿನ್ನಲು ನೀಡುವುದು. (ವಿದ್ಯಾರ್ಥಿಗಳು ಪರೀಕ್ಷೆಯ ಮೊದಲೇ ಪದಾರ್ಥಗಳನ್ನು ಮೇಲ್ವಿಚಾರಕರಿಗೆ ಒಪ್ಪಿಸುವುದು). |

28/2/18

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ:-

1. ರಾಜ್ಯದ ಎಲ್ಲಾ ಸರ್ಕಾರಿ /ಖಾಸಗಿ(ಅನುದಾನಿತ/ಅನುದಾನರಹಿತ) ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರುಗಳ ಗಮನಕ್ಕೆ ತರಲು, ಜಿಲ್ಲಾ ಉಪನಿರ್ದೇಶಕರ ಮೂಲಕ ಮುಂದಿನ ಕ್ರಮಕ್ಕಾಗಿ.
2. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರು ಮುಂದಿನ ಕ್ರಮಕ್ಕಾಗಿ ಇದರ ಪ್ರತಿಯನ್ನು ಪದವಿ ಪೂರ್ವ ಕಾಲೇಜುಗಳಿಗೆ ಕಳುಹಿಸಲು.
3. ಇ-ಅಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
4. ಕಛೇರಿ ಪ್ರತಿ